251

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
'ವಿಜ್ಞಾನ ಭವನ' ನಂ: 24/2, 3ನೇ ಮಹಡಿ, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070
ದೂರವಾಣಿ/ಫ್ಯಾಕ್ಸ್: 080-26711166 /26711160 ಇ-ಮೇಲ್: ksteps.dst@gmail.com

ಡಾ. ಹೆಚ್. ಹೊನ್ನೇಗೌಡ
ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್

DV3
ಬ. ಮುಂಚೆಲಾಂ

ನಂ. KSTePS/VGST/K-FIST(L1)/2017-18/GRD-681/79/2018-19

ದಿನಾಂಕ: 17.09.2018

ಮಾನ್ಯರೇ,

ವಿಷಯ: 2017-18ನೇ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ K-FIST(L1) ಯೋಜನೆಯಡಿಯಲ್ಲಿ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡುವುದರ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ವಿಯಇ 154 ವಿತ್ರಮ 2018(ಭಾಗ-1), ದಿ. 18.08.2018
2) ಕಛೇರಿ ಪತ್ರ ಸಂಖ್ಯೆ: No. KSTePS/VGST/GRD-681/K-FIST(L1)/2018/152, Date: 27.08.2018

*******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2017-18ನೇ ಸಾಲಿನಲ್ಲಿ ತಮ್ಮ ಸಂಸ್ಥೆಯಿಂದ ಸಲ್ಲಿಸಿದ ಪ್ರಸ್ತಾವನೆಯಾದ **"Identification of novel PARP inhibitors against human leukemic cell"** ನ್ನು ವಿತಂದಾಸದ ಪ್ರಮುಖ ಕಾರ್ಯಕ್ರಮವಾದ Karnataka Fund for Infrastructure Strengthening in Science and Technology **(K-FIST-L1)** ನ ಯೋಜನೆಯಡಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹವು ಆಯ್ಕೆ ಮಾಡಿದ್ದು, ಅದರಂತೆ ಆದೇಶ ನೀಡಿರುವುದು ಸರಿಯಷ್ಟೆ.

ಈ ಸಂಬಂಧ, ವಿತಂದಾಸದ K-FIST(L1) ಯೋಜನೆಯಡಿ ಆಯ್ಕೆಯಾದ ತಮ್ಮ ಸಂಸ್ಥೆಗೆ ಮೊದಲನೇ ಕಂತಾಗಿ ರೂ. 10.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ದಿನಾಂಕ: 17.09.2018 ರಂದು **The Finance Officer, University of Mysore** ಹೆಸರಿನಲ್ಲಿ ಚೆಕ್ (ಸಂ. 005990) ಬರೆದು, ಸದರಿ ಚೆಕ್ಕನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಮುಂದುವರಿದು, ಚೆಕ್ ಸ್ವೀಕರಿಸಿದ ನಂತರ ಸ್ವೀಕೃತಿ ರಶೀದಿ (Acknowledgement) ಯನ್ನು ಕೆಸ್ಟೆಪ್ಸ್‌ಗೆ ಕಳುಹಿಸುವುದು ಹಾಗೂ ಸದರಿ ಅನುದಾನವನ್ನು ಯಾವುದಾದರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆಯಲ್ಲಿಟ್ಟು (Saving Bank Account) ಅಗತ್ಯಕ್ಕನುಗುಣವಾಗಿ ಅನುದಾನವನ್ನು ಬಳಸುವಂತೆ ಕೋರಲಾಗಿದೆ.

ಸದರಿ ಅನುದಾನವನ್ನು ಉದ್ದೇಶಿತ ಯೋಜನೆಗೆ ಮಾತ್ರ ಬಳಸಿಕೊಳ್ಳುವುದು ಹಾಗೂ ಎಲ್ಲಾ ವೆಚ್ಚಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (Karnataka Transparency in Public Procurements Act, 1999 - http://finance.kar.nic.in/index.htm) ಅನುಸಾರ ಹಾಗೂ ದಾರ್ಶನಿಕ ಸಮೂಹ ಅನುಮೋದಿಸಿರುವ ವಿವಿಧ ಶೀರ್ಷಿಕೆಗಳಿಗೆ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

....2